# ಸವಿಸ್ತಾರವಾದ ವಿಷಯ: ‘ಮೌಲ್ಯಮಾಪನ’ಗಳ ಮೌಲ್ಯಮಾಪನ

ಹರಿಣಿ ಕಣ್ಣನ್



## ಪರಿಚಯ

ಶಿಕ್ಷಣದ ಹಕ್ಕು (RTE) ಕಾಯ್ದೆಯನ್ನು ಭಾರತದ ಸಂಸತ್ತು ಆಗಸ್ಟ್ 2009 ರಲ್ಲಿ ಜಾರಿಗೊಳಿಸಿತು ಹಾಗು ಇದು 6 ರಿಂದ 14 ವರ್ಷಗಳವರೆಗೆ ಶಿಕ್ಷಣವನ್ನು ಪಡೆಯುವುದನ್ನು ‘ಹಕ್ಕು’ ಎಂದು ಪ್ರತಿಪಾದಿಸಿತು. ಇದರೊಂದಿಗೆ ಈ ಕಾಯಿದೆ ಮೂಲಭೂತ ಸೌಕರ್ಯ, ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ, ಪಠ್ಯಕ್ರಮ, ಶಿಕ್ಷಕರ ತರಬೇತಿ, ಒಳಗೊಳ್ಳುವ ಸಮನ್ವಯ ಶಿಕ್ಷಣ ಇತ್ಯಾದಿ ವಿವಿಧ ‘ಅವಶ್ಯಕತೆಗಳನ್ನು’ ನಿರ್ದೇಶಿಸಿದೆ. ಪ್ರಸ್ತುತ ಈ ಲೇಖನ ನಿರಂತರ ಮತ್ತು ಸಮಗ್ರ ವಿದ್ಯಾರ್ಥಿ ಮೌಲ್ಯಮಾಪನ ವ್ಯವಸ್ಥೆ (Continous and Comprehensive student Evaluation system (CCE) ಯತ್ತ ಬೆಳಕು ಚೆಲ್ಲುತ್ತದೆ. ಈ ಆದೇಶಗಳ ಉದ್ದೇಶ ಮಕ್ಕಳಿಗೆ ‘ಗುಣಮಟ್ಟದ’ ಶಿಕ್ಷಣವನ್ನು ಖಾತ್ರಿಪಡಿಸುವುದು.

ಎಲ್ಲಾ ಆದೇಶಗಳ ನಡುವೆ ಸಿಸಿಇ (CCE) ಯ ಪರಿಚಯವು ಭಾರತದ ಸಾರ್ವಜನಿಕ ಶಿಕ್ಷಣದಲ್ಲಿ ಒಂದು ಮಹತ್ತರ ಸ್ಥಿತ್ಯಂತರವನ್ನು ಸೂಚಿಸುತ್ತದೆ. ಸಾಕಷ್ಟು ಹಿಂದಿನಿಂದಲೂ, ವಿದ್ಯಾರ್ಥಿಗಳ ಮೌಲ್ಯಮಾಪನಗಳು, ವಿದ್ಯಾರ್ಥಿಗಳು ತಮ್ಮ ಅಧ್ಯಯನದ ವೇಳೆಯಲ್ಲಿ ಎಂದರೆ ತಮ್ಮ ಕೋರ್ಸಿನ ಅವಧಿಯಲ್ಲಿ ಅಥವಾ ಒಂದು ವರ್ಷದ ಅವಧಿಯಲ್ಲಿ ಗಳಿಸಿದ ಶೈಕ್ಷಣಿಕ ಜ್ಞಾನವನ್ನು ಪರೀಕ್ಷೆಗಳ ಮೂಲಕ ಅಳೆಯುವ ವಿಧಾನವನ್ನೇ ಅನುಸರಿಸುತ್ತಿವೆ. ಇವು ಮಹತ್ತ್ವದ ಪರೀಕ್ಷೆಗಳಾಗಿವೆ, ಏಕೆಂದರೆ ವಿದ್ಯಾರ್ಥಿಗಳು ಮುಂದಿನ ತರಗತಿಗೆ ಬಡ್ತಿ ಪಡೆದಿದ್ದಾರೆಯೇ ಅಥವಾ ಅನುತ್ತೀರ್ಣರಾಗಿದ್ದಾರೆಯೇ ಎಂಬುದನ್ನು ನಿರ್ಧರಿಸುವಲ್ಲಿ ಈ ಅಂಕಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಸಾಂಪ್ರದಾಯಿಕ ಮೌಲ್ಯಮಾಪನ ವ್ಯವಸ್ಥೆಗಳ ವ್ಯಾಪ್ತಿ ಸಂಕುಚಿತವಾದುದು. ಏಕೆಂದರೆ ಇವು ಮುಖ್ಯವಾಗಿ ವಿದ್ಯಾರ್ಥಿಗಳ ‘ವಿಷಯ’ ಜ್ಞಾನವನ್ನು ಮೌಲ್ಯಮಾಪನ ಮಾಡುತ್ತವೆಯೇ ಹೊರತು ಸಾಮಾನ್ಯವಾಗಿ ಇತರ ಯಾವುದೇ ವಿಷಯಗಳನ್ನು ಪರಿಗಣಿಸುವುದು ಅತ್ಯಂತ ವಿರಳ. ಮತ್ತೊಂದೆಡೆ, ಸಿಸಿಇ (CCE) ನಿರಂತರ ಮತ್ತು ಸಮಗ್ರವಾಗಿದೆ: ‘ನಿರಂತರ’ ಎಂದರೆ ಶೈಕ್ಷಣಿಕ ಅವಧಿಯಲ್ಲಿ ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ‘ನಿರಂತರವಾಗಿ’ ಮಾಡಲಾಗುತ್ತದೆ ಮತ್ತು ‘ಸಮಗ್ರ’ ಎಂದರೆ ಇಲ್ಲಿ ಮೌಲ್ಯಮಾಪನಗಳು ಕೇವಲ ಶೈಕ್ಷಣಿಕ ವಿಷಯಗಳ ಕಲಿಕೆಯ ಮೇಲೆ ಕೇಂದ್ರೀಕರಿಸಿರುವುದಿಲ್ಲ ಬದಲಾಗಿ ಸಹ ಪಠ್ಯ ಚಟುವಟಿಕೆಗಳು ಮತ್ತು ವಿದ್ಯಾರ್ಥಿಯ ಗುಣ ನಡವಳಿಕೆಗಳ ಒಳಗೊಂಡಿರುತ್ತದೆ. ಶಾಲಾ ಶಿಕ್ಷಣವು ಕಲಿಕೆಯನ್ನು ಉತ್ತೇಜಿಸಬೇಕು, ಆನಂದಮಯ ಕಲಿಕೆಯಾಗಿರಬೇಕು ಮತ್ತು ಹೇರುವ ಒತ್ತಡ ಕಡಿಮೆಯಾಗಿರಬೇಕು ಮತ್ತು ಮಗುವಿನ ಸಮಗ್ರ/ಸರ್ವತೋಮುಖ ಬೆಳವಣಿಗೆಯ ಮೇಲೆ ಕೇಂದ್ರೀಕರಿಸಬೇಕು ಎಂಬುದು ಈ ಬದಲಾವಣೆಯ ಹಿಂದಿರುವ ಪ್ರೇರಣೆಗಳಾಗಿವೆ.

ಸಿಸಿಇ (CCE) ಕಾರ್ಯಕ್ರಮವನ್ನು ಪರಿಚಯಿಸುತ್ತಿದ್ದಂತೆಯೇ, ಅಬ್ದುಲ್ ಲತೀಫ್ ಜಮಿಲ್ ಪಾವರ್ಟಿ ಆಕ್ಷನ್ ಲ್ಯಾಬ್ (J-PAL) ಸಂಸ್ಥೆಯ ಸಂಶೋಧಕರು ಹರಿಯಾಣದಲ್ಲಿ ಸಿಸಿಇ (CCE) ಕಾರ್ಯಕ್ರಮದ ಅನುಷ್ಠಾನದ ಕಟ್ಟುನಿಟ್ಟಾದ ಮೌಲ್ಯಮಾಪನವನ್ನು ನಡೆಸಿದರು. ಆದರೆ ಫಲಿತಾಂಶಗಳು ನಿರಾಶಾದಾಯಕವಾಗಿದ್ದವು. ಸಿಸಿಇ (CCE) ಪ್ರಾಥಮಿಕ ಶಾಲೆಗಳ ಗುಣಮಟ್ಟ ಸುಧಾರಣೆಗೆ ವೇಗವರ್ಧಕದಂತೆ ಕಾರ್ಯನಿರ್ವಹಿಸುತ್ತದೆ ಎಂಬ ಭರವಸೆಯ ಹೊರತಾಗಿಯೂ, ಕಾರ್ಯಕ್ರಮವು ಕಲಿಕೆಯ ಫಲಿತಾಂಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕನಿಷ್ಠ ಮೂಲ ಉದ್ದೇಶಗಳನ್ನು ಪೂರೈಸುವತ್ತ ಗಮನ ಹರಿಸುವುದೂ ಕಂಡುಬರುತ್ತಿಲ್ಲ.

## ಸಿಸಿಇ (CCE) ಯ ‘ಸಿದ್ಧಾಂತ’

ಸಿಸಿಇ (CCE)ಯ ‘ನಿರಂತರ’ ಅಂಶವು ವಿದ್ಯಾರ್ಥಿಗಳ ಮೌಲ್ಯಮಾಪನ ಸಿದ್ಧಾಂತದ ತಿರುಳೇ ಆಗಿರುತ್ತದೆ ಎಂಬ ತತ್ತ್ವವು ಮೌಲ್ಯಮಾಪನವು ವಿಶಿಷ್ಟವಾಗಿ ಈ ಪದ್ಧತಿಯೂ ರೂಪಣಾತ್ಮಕ, ಅಂದರೆ ಕಲಿಕಾವಧಿಯ ಹಾಗೂ ಸಂಕಲನಾತ್ಮಕ ಅಂದರೆ ಕಲಿಕಾದಿತ್ಯದ ಮೌಲ್ಯಮಾಪನಗಳನ್ನು ಒಳಗೊಂಡಿರುತ್ತದೆ, ಇವುಗಳನ್ನು ಕ್ರಮವಾಗಿ ಅವಧಿಯ ಉದ್ದಕ್ಕೂ ಮತ್ತು ಅವಧಿಯ ಕೊನೆಯಲ್ಲಿ ನಡೆಸಲಾಗುತ್ತದೆ. ರೂಪಣಾತ್ಮಕ ಮೌಲ್ಯಮಾಪನಗಳು ಪರಿಶೀಲಿಸುವ/ತಪಾಸಿಸುವ ಸ್ವಭಾವವನ್ನು ಹೊಂದಿವೆ ಮತ್ತು ಅವುಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಬೋಧನೆ-ಕಲಿಕೆಯ ಪ್ರಕ್ರಿಯೆಯನ್ನು ಇನ್ನಷ್ಟು ಬಲಪಡಿಸಲು ಬಳಸಲಾಗುತ್ತದೆ. ಅವಧಿಯ ಕೊನೆಯಲ್ಲಿ ನಡೆಸಲಾಗುವ ಮೌಲ್ಯಾಂಕ/ಸಂಕಲನಾತ್ಮಕ ಮೌಲ್ಯಮಾಪನಗಳು, ವಿದ್ಯಾರ್ಥಿಗಳ ಜ್ಞಾನ ಗಳಿಕೆಯ ಪ್ರಮಾಣವನ್ನು ತಿಳಿಸುತ್ತವೆ. ಮೌಲ್ಯಾಂಕ/ ಸಂಕಲನಾತ್ಮಕ ಮೌಲ್ಯಮಾಪನಗಳು ಸಾಮಾನ್ಯವಾಗಿ ಪೆನ್ನು ಮತ್ತು ಪೇಪರುಗಳ ಔಪಚಾರಿಕ ಪರೀಕ್ಷೆಗಳಾಗಿದ್ದರೆ, ರೂಪಣಾತ್ಮಕ ಮೌಲ್ಯಮಾಪನಗಳು ಅನೌಪಚಾರಿಕವಾದವು ಅವುಗಳು ತರಗತಿಯ ಸಮಯದಲ್ಲಿ ಕೇಳಲಾಗುವ ಮೌಖಿಕ ಪ್ರಶ್ನೆಗಳು, ರಸಪ್ರಶ್ನೆಗಳು ಮತ್ತು ಪ್ರಾಜೆಕ್ಟ್ ಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ ಈ ರೀತಿಯ ಮೌಲ್ಯಮಾಪನಗಳನ್ನು ಒಂದಕ್ಕೊಂದು ಪೂರಕವಾಗಿ ಇರುವಂತೆ ಹಾಗೂ ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಯಲ್ಲಿ ಕಷ್ಟಗಳನ್ನು ಎದುರಿಸುವ ವಿದ್ಯಾರ್ಥಿಗಳನ್ನು ಕಲಿಕೆಯತ್ತ ಸೆಳೆಯುವಂತೆ ವಿನ್ಯಾಸ ಮಾಡಲಾಗಿದೆ.

ಸಿಸಿಇ(CCE)ಯ ‘ಸಮಗ್ರ’ ಅಂಶವು ಮಕ್ಕಳ ಪರಿಪೂರ್ಣ ಬೆಳವಣಿಗೆಯ ಮೇಲೆ ಕೇಂದ್ರೀಕರಿಸುತ್ತದೆ. ವಿದ್ಯಾರ್ಥಿಗಳು ಪ್ರಮುಖ ಜೀವನ-ಕೌಶಲ್ಯಗಳನ್ನು ಪಡೆಯಲು ಮತ್ತು ಸಮಾಜದ ಉತ್ಪಾದಕ

---

[1]This paper is a non-technical summary of Berry et. al. (2018). Please review the paper for more details on the evaluations and results. The working paper can be accessed at https://www.povertyactionlab.org/sites/default/files/publications/Failure-of-Frequent-Assesment_Berry-et-al._feb_2018.pdf

ಸದಸ್ಯರಾಗುವುದನ್ನು ಖಚಿತಪಡಿಸಿಕೊಳ್ಳಲು ಇದು ಅಗತ್ಯವೆಂದು ಸಾಕಷ್ಟು ಹಿಂದಿನಿಂದಲೂ ಶಿಕ್ಷಣತಜ್ಞರು ಹೇಳುತ್ತಲೇ ಬಂದಿದ್ದಾರೆ. ಈ ಉನ್ನತ ಆಶಯಗಳ ಹೊರತಾಗಿಯೂ, ಮಾದರಿ ಶಾಲಾ ಪಠ್ಯಕ್ರಮದಲ್ಲಿ ಈ ಜೀವನ ಕೌಶಲ್ಯಗಳನ್ನು ಅಳವಡಿಸಿಕೊಳ್ಳಲು ಯಾವುದೇ ಔಪಚಾರಿಕ ಕ್ರಮಗಳನ್ನು ಸಂಯೋಜಿಸಲಾಗಿಲ್ಲ; ಬದಲಿಗೆ ಇದನ್ನು ಶಾಲೆಗಳು ಮತ್ತು ಶಿಕ್ಷಕರಿಗೆ ಬಿಡಲಾಗಿದೆ. ಸಮಗ್ರ ಮೌಲ್ಯಮಾಪನದ ಕಾರ್ಯಕ್ರಮದಲ್ಲಿ ತಲುಪಬೇಕಾದ ಗುರಿಯನ್ನು ಅದನ್ನು ಸಾಧಿಸುವ ಮಾರ್ಗದ ಪ್ರಕ್ರಿಯೆಗಳನ್ನು ಒಂದಕ್ಕೊಂದು ಬೆಸೆಯಲಾಗಿದೆ.

## ಸಿಸಿಇ(CCE)ಯ ಅನುಷ್ಠಾನ ಮತ್ತು ಮೌಲ್ಯಮಾಪನ

ಆರ್ ಟಿಇ ಕಾಯಿದೆಯು ಸಿಸಿಇ(CCE)ಯನ್ನು ಪರಿಚಯಿಸುವುದನ್ನು ಆದೇಶಿಸಿದ್ದರೂ, ರಾಜ್ಯಗಳು ತಮ್ಮ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ಸೂಕ್ತವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕೆಂದು ಅದು ಸ್ಪಷ್ಟಪಡಿಸಿದೆ.

ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (CBSE) ತನ್ನ ಸಂಯೋಜಿತ ಶಾಲೆಗಳಲ್ಲಿ ಸಿಸಿಇ (CCE) ಅನ್ನು ಪರಿಚಯಿಸುವಲ್ಲಿ ಮಂಚೂಣಿಯಲ್ಲಿದೆ ಮತ್ತು ಅದರ ಕಾರ್ಯಕ್ರಮಗಳು ತಮ್ಮದೇ ಆದ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವ ವಿವಿಧ ರಾಜ್ಯಗಳಿಗೆ ನೀಲಿ ನಕ್ಷೆಯಾಗಿ ಕಾರ್ಯನಿರ್ವಹಿಸುತ್ತದೆ. ಏಪ್ರಿಲ್ 2018ರ ಹೊತ್ತಿಗೆ, ಬಹುತೇಕ ಎಲ್ಲಾ ರಾಜ್ಯಗಳು ಸಿಸಿಇ (CCE) ಅನ್ನು ಜಾರಿಗೆ ತಂದಿವೆ, ಆದರೂ ಶಾಲೆಗಳು ಮತ್ತು ಅದು ಒಳಗೊಳ್ಳುವ ತರಗತಿಯ ವ್ಯಾಪ್ತಿಯಲ್ಲಿ ವ್ಯತ್ಯಾಸಗಳಿವೆ.

ಸಿಸಿಇ(CCE) ಯ ವ್ಯಾಪಕ ಅಳವಡಿಕೆ ಮತ್ತು ಶಿಕ್ಷಣ ತಜ್ಞರಿಂದ (CBSE 2009) ಬೆಂಬಲದ ಹೊರತಾಗಿಯೂ, ಈ ಕಾರ್ಯಕ್ರಮದ ಪರಿಣಾಮಗಳ ಬಗ್ಗೆ ಅಷ್ಟೇನೂ ತಿಳಿದಿಲ್ಲ. ಇದನ್ನು ಸಾಧಿಸಲು ಇನ್ನಷ್ಟು ಸಹಕಾರ ಬೇಕಿದೆ. ಕಾರ್ಯಕ್ರಮದ ಪರಿಣಾಮ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಅಂಕಿ ಅಂಶಗಳ ಆಧಾರದ ಮೇಲೆ ಪ್ರಮಾಣಿಕರಿಸುವುದು ಅಂತಿಮವಾಗಿ ಪ್ರಾಯೋಗಿಕ ಪ್ರಶ್ನೆಯಾಗಿದೆ ಮತ್ತು ಕಟ್ಟುನಿಟ್ಟಾದ ತಪಾಸಣೆಗೆ ಒಳಪಡಿಸದೆ ಕಾರ್ಯಕ್ರಮದ 'ಪರಿಣಾಮ'ದ ಕುರಿತು ತೀರ್ಮಾನಿಸಲು ಸಾಧ್ಯವಿಲ್ಲ. ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಬರಹಗಳಲ್ಲಿ ಸಾಮಾಜಿಕ ಕಾರ್ಯಕ್ರಮಗಳು ಮತ್ತು ನೀತಿಗಳ ಕುರಿತ ಫಲಿತಾಂಶದ ಮೌಲ್ಯಮಾಪನಗಳು ಸರ್ವೇಸಾಮಾನ್ಯವಾಗಿದೆ. ಹೊಸ ಕಾರ್ಯಕ್ರಮಗಳು 'ಕೆಲಸ ಮಾಡುತ್ತವೆಯೇ' ಎಂಬುದನ್ನು ಅರ್ಥಮಾಡಿಕೊಳ್ಳಲು ಸರ್ಕಾರಗಳು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಇದನ್ನು ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳುತ್ತಿವೆ.

ಕೇಂದ್ರ ಸರ್ಕಾರವು ಸಿಸಿಇ (CCE) ಯನ್ನು ಅಳವಡಿಸಿಕೊಂಡ ಸ್ವಲ್ಪ ಸಮಯದ ನಂತರ, ಹರಿಯಾಣದ ಶಿಕ್ಷಣ ಇಲಾಖೆಯು 2012-2013 ಶೈಕ್ಷಣಿಕ ವರ್ಷದಲ್ಲಿ ಹರಿಯಾಣ ರಾಜ್ಯದಲ್ಲಿ ಸಿಸಿಇ (CCE) ಕಾರ್ಯಕ್ರಮದ ಮೌಲ್ಯಮಾಪನವನ್ನು ನಡೆಸಲು ಜೆ-ಪಾಲ್ (J-PAL)ನ್ನು ಸಂಪರ್ಕಿಸಿತು. ಈ ಮೌಲ್ಯಮಾಪನವು ಹರಿಯಾಣದಲ್ಲಿ ಸಿಸಿಇ (CCE) ಅನುಷ್ಠಾನಕ್ಕಷ್ಟೇ ಸೀಮಿತವಾಗಿದ್ದರೂ, ಇಲ್ಲಿ ಒಳನೋಟಗಳು ದೊರೆತವು. ಲೇಖನವು ಕಾರ್ಯಕ್ರಮದ, ರೂಪುರೇಷೆ, ಮಾಹಿತಿ ಮತ್ತು ತೀರ್ಮಾನಗಳನ್ನು ವಿವರಿಸುವ ಮೊದಲು; ಪರಿಣಾಮದ ಮೌಲ್ಯಮಾಪನಗಳ ಕುರಿತಂತೆ ಕಿರು ಪರಿಚಯದ ಅಗತ್ಯವನ್ನು ಸೂಚಿಸುತ್ತದೆ.

## ಯಾದೃಚ್ಛಿಕ ನಿಯೋಜನೆಯನ್ನು ಬಳಸಿಕೊಂಡು ಪ್ರಭಾವದ ಮೌಲ್ಯಮಾಪನ

'ಪ್ರಭಾವ' ಎಂಬ ಪದ ಆಡುಮಾತಿನಲ್ಲಿ ಅನೇಕ ಅರ್ಥಗಳನ್ನು ಹೊಂದಿದ್ದರೂ, ಪ್ರಾಯೋಗಿಕ ಸಂಶೋಧನೆಯ ಸಂದರ್ಭದಲ್ಲಿ ಅದು ಅತ್ಯಂತ ನಿಖರವಾದ ವ್ಯಾಖ್ಯಾನವನ್ನು ಹೊಂದಿದೆ. ಯಾವುದೇ ಒಂದು ಗುಂಪು ಒಂದು ಕಾರ್ಯಕ್ರಮಕ್ಕೆ ಒಡ್ಡಿಕೊಂಡಾಗ ಕಾರ್ಯಕ್ರಮ ಶೈಕ್ಷಣಿಕ, ಆರ್ಥಿಕ ಲ್ಲಿಯೇ ಸಾಮಾಜಿಕ ಸ್ವರೂಪದ್ದಿರಬಹುದು. ಉಂಟಾಗುವ ಪರಿಣಾಮ ಹಾಗೂ ಆ ಕಾರ್ಯಕ್ರಮಕ್ಕೆ ಒಡ್ಡಿಕೊಳ್ಳದೇ ಇರುತ್ತಿದ್ದರೆ ಇರಬಹುದಾದ ಸ್ಥಿತಿ-ಇವೆರಡರ ನಡುವಿನ ವ್ಯತ್ಯಾಸವನ್ನೇ 'ಪ್ರಭಾವ' ಎನ್ನುವರು. ಇದನ್ನು ಅಘಟಿತ ಸಂಭಾವ್ಯತೆ ಹಾಗೂ ಘಟಕ ಸಂಭಾವ್ಯತೆಗಳ ನಡುವಿನ ವ್ಯತ್ಯಾಸ ಎಂದೂ ಪರಿಗಣಿಸಬಹುದು.

ತಕ್ಷಣವೇ ಗುರುತಿಸಬಹುದಾದಂತೆ ಅಘಟಕ ಸಂಭಾವ್ಯತೆಯನ್ನು ಊಹಿಸುವುದು ಅಸಾಧ್ಯ. ಮತ್ತು ಫಲಿತಾಂಶಗಳನ್ನು ಹೋಲಿಕೆ ಮಾಡಲು ಗುಂಪನ್ನು ರಚಿಸಲು ನಾವು ಇತರ ವಿಧಾನಗಳನ್ನು ಬಳಸಬೇಕಾಗುತ್ತದೆ. ಶೈಕ್ಷಣಿಕ ಪರಿಭಾಷೆಯಲ್ಲಿ, ಈ ಗುಂಪನ್ನು ಹೋಲಿಕೆ ಅಥವಾ ನಿಯಂತ್ರಣ ಗುಂಪು ಎಂದು ಕರೆಯಲಾಗುತ್ತದೆ. ಪರಿಣಾಮವನ್ನು ಪ್ರಮಾಣೀಕರಿಸಲು ಬಳಸಬಹುದಾದ ಹಲವು ವಿಭಿನ್ನ ವಿಧಾನಗಳಿದ್ದರೂ, ವಿಧಾನದ ವಿಶ್ವಾಸಾರ್ಹತೆಯು ಪ್ರಾಥಮಿಕವಾಗಿ ಹೋಲಿಕೆಯ/ನಿಯಂತ್ರಕ ಗುಂಪನ್ನು ಹೇಗೆ ರಚಿಸಲಾಗಿದೆ ಎಂಬುದರ ಮೇಲೆ ಅವಲಂಬಿಸಿದೆ. ಈ ಗುಂಪುಗಳನ್ನು ಯಾದೃಚ್ಛಿಕ, ಅರೆ-ಯಾದೃಚ್ಛಿಕ ಅಥವಾ ಯಾದೃಚ್ಛಿಕವಲ್ಲದ ರೀತಿಯಲ್ಲಿ ರಚಿಸಬಹುದು. ಜೆ-ಪಾಲ್ (J-PAL) ಸಂಸ್ಥೆಯ ಸಂಶೋಧಕರು ಸಿಸಿಇ (CCE) ಕಾರ್ಯಕ್ರಮದ ಪ್ರಭಾವವನ್ನು ಮೌಲ್ಯಮಾಪನ ಮಾಡಲು ಯಾದೃಚ್ಛಿಕ ನಿಯಂತ್ರಿತ ಪ್ರಯೋಗ (ಆರ್ ಸಿಟಿ-RCT) ಮಾದರಿಯನ್ನು ಆಯ್ಕೆ ಮಾಡಿಕೊಂಡರು. ಆರ್ ಸಿಟಿ (RCT) ಗಳನ್ನು ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಲು ಕಟ್ಟುನಿಟ್ಟಿನ ಮತ್ತು ವಿಶ್ವಾಸಾರ್ಹ ಮಾರ್ಗ ಎಂದು ಪರಿಗಣಿಸಲಾಗಿದೆ. ಏಕೆಂದರೆ ಅವುಗಳು ಕಾರ್ಯಕ್ರಮವು ಒಳಗೊಳ್ಳುವ ವ್ಯಕ್ತಿಗಳು ಅಥವಾ ಗುಂಪುಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡುತ್ತದೆ, ಅದೇ ರೀತಿ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸದಂತೆ ಯಾದೃಚ್ಛಿಕವಾಗಿಯೇ ನಿಯೋಜಿಸುತ್ತದೆ. ಆರ್ ಸಿಟಿ (RCT) ವಿಧಾನದ ಸಾಮರ್ಥ್ಯವು ವ್ಯಕ್ತಿಗಳು ಅಥವಾ ಗುಂಪುಗಳ ಯಾದೃಚ್ಛಿಕ ನಿಯೋಜನೆಯ ಮೇಲೆ ನಿಂತಿದೆ ಕಾರ್ಯಕ್ರಮದ ಅನುಷ್ಠಾನಕ್ಕೆ ಮುಂಚಿತವಾಗಿ, ಈ ಗುಂಪುಗಳು ಸ್ವಭಾವದಲ್ಲಿ ಒಂದೇ ತೆರನಾಗಿರುತ್ತವೆ ಮತ್ತು ಅವುಗಳು ಯೋಜನೆಗೆ/ಕಾರ್ಯಕ್ರಮಕ್ಕೆ ತಮ್ಮನ್ನು ಒಡ್ಡಿಕೊಳ್ಳುವುದರ ಮೂಲಕ ಭಿನ್ನವಾಗುತ್ತವೆ. ಇದನ್ನು ಆಧಾರವಾಗಿಟ್ಟುಕೊಂಡು ಕಾರ್ಯಕ್ರಮದ ಕೊನೆಯಲ್ಲಿ ಫಲಿತಾಂಶಗಳಲ್ಲಿ ವ್ಯತ್ಯಾಸಗಳಿದ್ದರೆ, ಈ ವ್ಯತ್ಯಾಸಕ್ಕೆ ಕಾರ್ಯಕ್ರಮವೇ (ಕಾರ್ಯಕ್ರಮದ ಅನುಷ್ಠಾನವೇ) ಏಕಮೇವ ಕಾರಣವೇ ಹೊರತು ಇತರ ಅಂಶಗಳಲ್ಲ ಎಂದು ಹೇಳಬಹುದು.

## ಹರಿಯಾಣದ ಸಿಸಿಇ (CCE) ಕಾರ್ಯಕ್ರಮದ ವಿನ್ಯಾಸ ಮತ್ತು ಜಾರಿ

2011 ವೇಳೆಗೆ ಸಿಸಿಇ (CCE) ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಿದ ಮತ್ತು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ ಮೊದಲ ರಾಜ್ಯಗಳಲ್ಲಿ ಹರಿಯಾಣವು ಒಂದಾಗಿದೆ. ಈ ಕಾರ್ಯಕ್ರಮವನ್ನು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎಸ್ ಇಆರ್ ಟಿ–SCERT) ವಿನ್ಯಾಸಗೊಳಿಸಿದೆ ಮತ್ತು ಇದು ಸಿಬಿಎಸ್ ಸಿಯ ಕಾರ್ಯಕ್ರಮಗಳಿಂದ ಹೆಚ್ಚು ಪ್ರಭಾವಿತವಾಗಿದೆ. 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳನ್ನು ಪ್ರತೀ ತಿಂಗಳು ಮತ್ತು 6 ರಿಂದ 8ನೇ ತರಗತಿಯವರೆಗೆ ಮೂರು ತಿಂಗಳಿಗೊಮ್ಮೆ ಮೌಲ್ಯಮಾಪನ ಮಾಡುವ ಮೂಲಕ ನಿರಂತರ ಮೌಲ್ಯಮಾಪನವನ್ನು ಕಾರ್ಯತಗೊಳಿಸಲಾಗಿದೆ. ಪರೀಕ್ಷಾ ಮೌಲ್ಯಮಾಪನವನ್ನು ಸುಲಭಗೊಳಿಸಲು, ಭಾಷಾ ವಿಷಯಗಳನ್ನು ಕೇಳುವ, ಓದುವ ಮತ್ತು ಬರೆಯುವ ಕೌಶಲ್ಯಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಯಿತು ಮತ್ತು ಗಣಿತ ಮತ್ತು ಪರಿಸರ ವಿಜ್ಞಾನಗಳನ್ನು (EVS) ಮೂಲಭೂತ ಪರಿಕಲ್ಪನೆಗಳ ಕಲಿಕೆಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಯಿತು. ಇವುಗಳಲ್ಲಿ ಹೆಚ್ಚಿನವುಗಳಿಗೆ ಪ್ರಮುಖ ಉಪ–ಕೌಶಲ್ಯಗಳು/ ಪರಿಕಲ್ಪನೆಗಳನ್ನು ಗುರುತಿಸಲಾಗಿದೆ ಮತ್ತು ಇವು ಎಲ್ಲದರಲ್ಲೂ ಮಕ್ಕಳನ್ನು ಮೌಲ್ಯಮಾಪನಕ್ಕೆ ಒಳಪಡಿಸುವ ಅಗತ್ಯವಿದೆ. ಈ ಕಾರ್ಯಕ್ರಮವನ್ನು ಮಾಸಿಕ ಮೌಲ್ಯಮಾಪನ ವರದಿಗಳ ದಾಖಲೆಯನ್ನು ಸಂಗ್ರಹಿಸುವ ಮೂಲಕ ಸೂಕ್ತವಾಗಿ ದಾಖಲೀಕರಿಸುವ ಅಗತ್ಯವಿದೆ. ಈ ವರದಿಗಳಲ್ಲಿ ಶಿಕ್ಷಕರು ಪ್ರತಿ ಉಪ ಕೌಶಲ್ಯದ ಮೌಲ್ಯಮಾಪನವನ್ನು ಸಾಕಷ್ಟು ವಿವರಣಾತ್ಮಕ ಅಭಿಪ್ರಾಯಗಳೊಂದಿಗೆ ದಾಖಲಿಸಿರುತ್ತಾರೆ ಹಾಗು ವಿವಿಧ ಅವಧಿಗಳಲ್ಲಿ ನಡೆಸಲಾದ ಪರೀಕ್ಷೆಗಳ ಪ್ರಗತಿಯ ಮಾಹಿತಿಯೂ ಲಭ್ಯವಿರುತ್ತದೆ. ಹೀಗೆ ಪ್ರತಿ ತರಗತಿಗೆ ದಾಖಲಾದ ಪ್ರತಿ ಮಗುವಿನ ಕುರಿತಂತೆ ಸಮಗ್ರ ವಿವರಗಳು ಲಭ್ಯವಿರುತ್ತದೆ. ಅಂಕಗಳನ್ನು ನೀಡುವುದನ್ನು ಕೈಬಿಟ್ಟು ಅವಧಿಯ ಕೊನೆಯಲ್ಲಿ 6, 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ಗ್ರೇಡ್‌ಗಳನ್ನು ನೀಡಲಾಯಿತು ಮತ್ತು 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ವಿವರಣಾತ್ಮಕ ಸೂಚನೆಗಳ ಸಾರಾಂಶವನ್ನು ಒದಗಿಸಲಾಯಿತು. ಈ ಕಾರ್ಯಕ್ರಮವು ಮೌಖಿಕ ಕಂಠಪಾಠ, ಪ್ರಶ್ನೋತ್ತರ, ತರಗತಿ ಭಾಗವಹಿಸುವಿಕೆ, ರಸಪ್ರಶ್ನೆಗಳು, ಯುನಿಟ್ ಪರೀಕ್ಷೆಗಳು, ಮತ್ತು ಯೋಜನೆಗಳ ತಯಾರಿಗಳಂತಹ ವಿವಿಧ ಮೌಲ್ಯಮಾಪನ ಸಾಧನಗಳ ಬಳಕೆಯನ್ನು ಅಗತ್ಯಪಡಿಸಿತು. ಮೌಲ್ಯಮಾಪನದಲ್ಲಿ ವಸ್ತುನಿಷ್ಠತೆ ಮತ್ತು ಮೌಲ್ಯಮಾಪನದ ಗುಣಮಟ್ಟವನ್ನು ನಿಗದಿಪಡಿಸಲು, ವಿವರವಾದ ಶ್ರೇಣೀಕರಣದ ಮಾರ್ಗಸೂಚಿಗಳನ್ನು ಒದಗಿಸಲಾಗಿದೆ. ಪಠ್ಯದ ಜೊತೆಗೆ, ಪಠ್ಯೇತರ ವಿಷಯಗಳಾದ ಭಾಗವಹಿಸುವಿಕೆ, ಸೃಜನಶೀಲತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೌಶಲ್ಯ ಮತ್ತು ಗೌರವ, ಶುಚಿತ್ವ, ನಾಯಕತ್ವದ ಗುಣಗಳು ಮುಂತಾದ ವೈಯಕ್ತಿಕ ಗುಣಗಳಂತಹ ಅಂಶಗಳನ್ನು ಸಹ ಮೌಲ್ಯಮಾಪನ ಮಾಡಲಾಯಿತು.

ಕಾರ್ಯಕ್ರಮವನ್ನು ಎಸ್ ಸಿಇಆರ್ ಟಿ ಪರಿಕಲ್ಪನೆಯಲ್ಲಿ ಮಾಡಲಾಗಿದ್ದರೂ, ಕಾರ್ಯಕ್ರಮದ ತರಬೇತಿಯನ್ನು ಖಾಸಗಿ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಲಾಯಿತು. 'ಕ್ಯಾಸ್ಕೇಡ್' (ತರಬೇತುದಾರರ ತರಬೇತಿ) ತರಬೇತಿ ಮಾದರಿಯನ್ನು ಅಳವಡಿಸಿಕೊಂಡು ಅಲ್ಲಿ ಎಸ್‌ಸಿಇಆರ್‌ಟಿಯ ಬೋಧಕರು ವಿವಿಧ ಹೊರಗುತ್ತಿಗೆಗಳ ಸಂಪನ್ಮೂಲ ವ್ಯಕ್ತಿಗಳಿಗೆ ಈ ಪರಿಕಲ್ಪನೆಗಳನ್ನು ಪರಿಚಯಿಸಿದರು. ಅವರು ಮುಖ್ಯ ತರಬೇತುದಾರರನ್ನು (ಮಾಸ್ಟರ್ ಟ್ರನರ್ಸ್) ತರಬೇತುಗೊಳಿಸುತ್ತಾರೆ ಮತ್ತು ಆ ತರಬೇತುದಾರರು ಇತರರಿಗೆ ತರಬೇತಿ ನೀಡುತ್ತಾರೆ.ತರಬೇತಿದಾರರು ಒಂದು ವಾರ ಕಾಲ ತಾಲ್ಲೂಕು ಕೇಂದ್ರದಲ್ಲಿ ಶಿಕ್ಷಕರಿಗೆ ತರಬೇತಿಯನ್ನು ನೀಡಿದರು. ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ಅಗತ್ಯವಿರುವ ದಾಖಲೀಕರಣದ ಕುರಿತಂತೆ ಪ್ರಮುಖವಾಗಿ ತರಬೇತಿ ನೀಡಲಾಯಿತು. ಬೋಧನಾ ವಿಧಾನಗಳನ್ನು ಹೇಗೆ ಬದಲಾಯಿಸಿಕೊಳ್ಳಬೇಕು ಅಥವಾ ಕಲಿಕೆಯಲ್ಲಿ ಹಿಂದುಳಿದಿರುವವರಿಗೆ ಹೇಗೆ ಸಹಾಯ ಮಾಡಬಹುದು ಎಂಬುದರ ಕುರಿತಾಗಿಯೂ ಸ್ವಲ್ಪ ಮಟ್ಟಿಗೆ ತಿಳಿಸಿಕೊಡಲಾಯಿತು.

ಕಾರ್ಯಕ್ರಮದ ವಿನ್ಯಾಸ ಮತ್ತು ಮೌಲ್ಯಮಾಪನಕ್ಕಾಗಿ ರೂಪುರೇಷೆಗಳನ್ನು ತಯಾರಿಸುವ ಸಮಯದಲ್ಲಿ; ಜೆ–ಪಾಲ್ (J–PAL)ನ ಸಂಶೋಧಕರು ಕ್ಷೇತ್ರದಲ್ಲಿ ಸದೃಢ ಮೇಲ್ವಿಚಾರಣಾ ವ್ಯವಸ್ಥೆ ಮತ್ತು ಮಾರ್ಗದರ್ಶನದ ಅಗತ್ಯವನ್ನು ಒತ್ತಿ ಹೇಳಿದರು. ಕಾರ್ಯಕ್ರಮ ಆರಂಭವೇನೋ ಆಗುತ್ತದೆ ಆದರೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವವರಿಗೆ ಮತ್ತು ಭಾಗವಹಿಸುವವರಿಗೆ ನಿರಂತರ ಪ್ರೋತ್ಸಾಹವಿಲ್ಲದೇ ಹೋದರೆ ಅನುಷ್ಠಾನವು ಆಗಾಗ್ಗೆ ಹಿನ್ನೆಡೆಯನ್ನು ಅನುಭವಿಸಬೇಕಾಗುತ್ತದೆ. ಪ್ರಸ್ತುತ ಪರಿಚಯಿಸಲಾಗುತ್ತಿರುವ ಸಿಸಿಇ(CCE) ಕಾರ್ಯಕ್ರಮಕ್ಕೂ ಅದೇ ಪಾಡು ಎದುರಾಗಬಾರದು ಎಂಬ ಕಾರಣಕ್ಕಾಗಿ, ಶಿಕ್ಷಣ ಇಲಾಖೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನಕ್ಕಾಗಿ ಸೂಕ್ತ ವ್ಯವಸ್ಥೆಗಳನ್ನು ರೂಪಿಸಲು ಜೆ–ಪಾಲ್ (J–PAL) ಸಂಶೋಧನಾ ತಂಡದ ಸಹಾಯವನ್ನು ಕೋರಿತು. ಆದರೆ ಆಶ್ಚರ್ಯ ಎಂಬಂತೆ ಈಗಾಗಲೇ ಅಸ್ತಿತ್ವದಲ್ಲಿರುವ ಸಹಾಯಕ ಬ್ಲಾಕ್ ಸಂಪನ್ಮೂಲ ಸಂಯೋಜಕರು / ಸಮನ್ವಯಾಧಿಕಾರಿ (ABRC) ಎಂಬ ಸರ್ಕಾರಿ ಅಧಿಕಾರಿ ವರ್ಗದ ಮುಖ್ಯ ಕಾರ್ಯ, ಶಾಲಾ ಕಾರ್ಯನಿರ್ವಹಣೆಯನ್ನು ಬೆಂಬಲಿಸುವುದು ಎಂಬುದಾಗಿ ಕಾಗದ ಪತ್ರಗಳು ದಾಖಲಿಸುತ್ತವೆ, ಆದರೆ ಶೈಕ್ಷಣಿಕ ಸಲಹೆಗಾರರಾಗಿ ಅವರ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ಅವರಿಗೆ ನೀಡಲಾದ ನಿರ್ದಿಷ್ಟ ಜವಬ್ದಾರಿಗಳನ್ನು ವಹಿಸುವ ಬದಲಿಗೆ ಅವರನ್ನು ಇತರೆ ಶಿಕ್ಷಕರೊಂದಿಗೆ ಸಂವಹನ ನಡೆಸಲು 'ಪೋಸ್ಟ್ ಮ್ಯಾನ್ಗಳಂತೆ' ಹಾಗು ದತ್ತಾಂಶಗಳನ್ನು ಸಂಗ್ರಹಿಸಲು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು ಬಳಸಿಕೊಳ್ಳಲಾಗುತ್ತಿದೆ. ಇಲಾಖೆಯೊಂದಿಗೆ ಸಮಾಲೋಚಿಸಿ, ಜೆ–ಪಾಲ್ ಸಂಶೋಧನಾ ತಂಡವು, ಎಬಿಆರ್‌ಸಿ(ABRC)ಗಳ ಪಾತ್ರವನ್ನು ಮಾರ್ಗದರ್ಶಕರು ಮತ್ತು ಮೇಲ್ವಿಚಾರಕರಾಗಿ ವ್ಯವಸ್ಥಿತಗೊಳಿಸುವ ಮತ್ತು ಇದನ್ನು ಕಾರ್ಯಗತಮಾಡುವ ನಿಟ್ಟಿನಲ್ಲಿ ಕೆಲಸಮಾಡಿತು. ಇದನ್ನು ಅವರ ಜವಾಬ್ದಾರಿಗಳ ಸ್ಪಷ್ಟ ವ್ಯಾಖ್ಯಾನ, ಸಿಸಿಇ (CCE) ಕಾರ್ಯಕ್ರಮದ ಕುರಿತ ತರಬೇತಿ, ಅದರ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಒದಗಿಸುವ ಮೂಲಕ ಮತ್ತು ಅಂತಿಮವಾಗಿ ಅನುಷ್ಠಾನದ ಕುರಿತ ಆಂತರಿಕ ವಿಮರ್ಶೆ ಮತ್ತು ಜಿಲ್ಲೆಯಲ್ಲಿ ಪ್ರತಿಕ್ರಿಯೆ (ಫೀಡ್‌ಬ್ಯಾಕ್) ವ್ಯವಸ್ಥೆಗಳನ್ನು ವ್ಯವಸ್ಥಿತಗೊಳಿಸುವುದರ ಮೂಲಕ ಮಾಡಲಾಯಿತು.

## ಮೌಲ್ಯಮಾಪನ ವಿನ್ಯಾಸ, ಮಾದರಿ ಮತ್ತು ಡೇಟಾ

ಕುರುಕ್ಷೇತ್ರ ಮತ್ತು ಮಹೇಂದ್ರಗಢ ಈ ಎರಡು ಜಿಲ್ಲೆಗಳ ನಾಲ್ಕು ಬ್ಲಾಕ್ (ತಾಲ್ಲೂಕು)ಗಳಲ್ಲಿ ಮೌಲ್ಯಮಾಪನವನ್ನು ನಡೆಸುವಂತೆ ಶಿಕ್ಷಣ ಇಲಾಖೆ ನಮಗೆ ಮನವಿ ಮಾಡಿತು. ಈ ನಾಲ್ಕು ಬ್ಲಾಕ್ ಗಳಲ್ಲಿರುವ (ಮಹೇಂದ್ರಗಢ್‌ದ ಅಟೆಲಿ ಹಾಗು ನರ್ನಾಲ್

*[2]A pedagogy intervention which involved remedial teaching at the level of student's ability by grouping was also evaluated at the same time (TaRL). Please refer to (Banerjee 2017) which describes the findings from this and related interventions.*

ಮತ್ತು ಕುರುಕ್ಷೇತ್ರದ ಥಾನೇಸರ್ ಹಾಗೂ ಪೆಹೋವಾದಲ್ಲಿ) ಎಲ್ಲಾ ಶಾಲೆಗಳನ್ನು ಆಯ್ದುಕೊಂಡು, ಅದರಲ್ಲಿ 500 ಶಾಲೆಗಳನ್ನು ಮಾದರಿಗಾಗಿ/ಸ್ಯಾಂಪಲ್ ಆರಿಸಿಕೊಳ್ಳಲಾಗಿದೆ. ಇದರಲ್ಲಿ ನಾಲ್ಕು ನೂರು ಶಾಲೆಗಳು 1 ರಿಂದ 5ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ ಶಾಲೆಗಳು, ಉಳಿದ ಒಂದು ನೂರು 6 ರಿಂದ 8 ರವರೆಗಿನ ತರಗತಿಗಳನ್ನು ಹೊಂದಿರುವ ಮಾಧ್ಯಮಿಕ, ಪ್ರೌಢ ಅಥವಾ ಹಿರಿಯ ಮಾಧ್ಯಮಿಕ ಶಾಲೆಗಳಾಗಿವೆ. ಯಾದೃಚ್ಛಿಕ ನಿಯಂತ್ರಿತ ಪ್ರಯೋಗ (CCE) ಮಾದರಿಯ ಮೂಲಕ ಶಾಲೆಗಳನ್ನು ಯಾದೃಚ್ಛಿಕವಾಗಿ ಸಿಸಿಇ (CCE) ಯನ್ನು ಅನುಷ್ಠಾನಗೊಳಿಸಲು ಅಥವಾ ನಿಯಂತ್ರಣ ಗುಂಪಿಗೆ ಆಯ್ಕೆಮಾಡಲಾಗಿದೆ.

### ಯಾವುದರ ಮೇಲೆ ಪರಿಣಾಮ?

ಪರಿಣಾಮಗಳ ಮೌಲ್ಯಮಾಪನವನ್ನು ನಡೆಸುತ್ತಿರುವಾಗ, ಯಾವ ಬದಲಾವಣೆಗಳನ್ನು ತರಲು ಕಾರ್ಯಕ್ರಮವನ್ನು ವಿನ್ಯಾಸ ಗೊಳಿಸಲಾಗಿತ್ತೋ, ಆ ಕುರಿತ ಫಲಿತಾಂಶಗಳನ್ನು ಗುರುತಿಸುವುದು ಅವಶ್ಯಕ. ಒಮ್ಮೆ ಈ ಕಾರ್ಯಕ್ರಮದ ಅನುಷ್ಠಾನದ ಮೂಲಕ ನಿರೀಕ್ಷಿಸಲಾಗುತ್ತಿರುವ ಫಲಿತಾಂಶಗಳ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದರೆ, ಈ ಪರಿಕಲ್ಪನೆಗಳನ್ನು ಅಳೆಯಲು ಅಗತ್ಯವಿರುವ ಮಾನದಂಡಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಸಿಸಿಇ (CCE) ಯನ್ನು ಶಾಲೆಗಳಲ್ಲಿ ಪರಿಚಯಿಸುವುದರಿಂದ ಉಂಟಾಗಬಲ್ಲ ಅನೇಕ ಬದಲಾವಣೆಗಳಿವೆ. ಅವು –ವಿದ್ಯಾರ್ಥಿಗಳ ಮೇಲೆ ಕಡಿಮೆ ಒತ್ತಡ, ಶಾಲೆಗಳು ಅವರಿಗೆ ಖುಷಿ ತರುವ ವಿಷಯ/ ಆನಂದದಾಯಕವಾಗಬಹುದು, ಅವರ ಆತ್ಮಗೌರವ ಮತ್ತು ಕಲಿಕೆ ಸುಧಾರಿಸಬಹುದು. ಒಂದು ಮುಖ್ಯ ಕಾರಣಕ್ಕಾಗಿ ನಮ್ಮ ಮೌಲ್ಯಮಾಪನದ ಆದ್ಯತೆಯು ಕಲಿಕೆಯ ಮೇಲೆ ಸಿಸಿಇ (CCE) ಪ್ರಭಾವವನ್ನು ಪ್ರಮಾಣೀಕರಿಸಲಷ್ಟೇ ಸೀಮಿತವಾಗಿತ್ತು. ಕ್ಷಿಪ್ರಗತಿಯಲ್ಲಿ (ದಾಪುಗಾಲಿಕ್ಕುತ್ತಾ) ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಮಹತ್ತರ ಸಾಧನೆಮಾಡಿದ ಭಾರತದಂತಹ ದೇಶದಲ್ಲಿ ಅದೇ ವೇಗದಲ್ಲಿ ವಿದ್ಯಾರ್ಥಿಗಳ ಕಲಿಕೆ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಲಾಗಿಲ್ಲ. ವರ್ಷದಿಂದ ವರ್ಷಕ್ಕೆ, ರಾಷ್ಟ್ರೀಯ ಮೌಲ್ಯಮಾಪನ ಸಮೀಕ್ಷೆಗಳು ಮತ್ತು ಶೈಕ್ಷಣಿಕ ಮಟ್ಟದ ವಾರ್ಷಿಕ ಸ್ಥಿತಿಗತಿ ವರದಿಗಳು (ASER), ಕಲಿಕೆಯ ಫಲಿತಾಂಶಗಳಲ್ಲಿ ಯಾವುದೇ ಹೆಚ್ಚಳ ಕಂಡುಬಂದಲ್ಲಿ ಆ ಕುರಿತು ಸಂಕ್ಷಿಪ್ತ ವರದಿ ಮಾಡುತ್ತವೆ. ಹೀಗಾಗಿ ಸಿಸಿಇ (CCE) ಯಂತಹ ವ್ಯಾಪಕ ಕಾರ್ಯಕ್ರಮ ಪ್ರಪ್ರಥಮವಾಗಿ ಮತ್ತು ಪ್ರಮುಖವಾಗಿ ಕಲಿಕೆಯ ಫಲಿತಾಂಶಗಳಲ್ಲಿ ಸುಧಾರಣೆಗಳನ್ನು ತರಬೇಕು. ಕಾರ್ಯಕ್ರಮದ ವಿನ್ಯಾಸ ಮತ್ತು ಸಿಸಿಇ (CCE) ಯ ಅನುಷ್ಠಾನದಲ್ಲಿ ನಂಬಿಕೆ ಹೊಂದಿದ ಹಿರಿಯ ಅಧಿಕಾರಿಗಳು ಈ ವಿಚಾರವನ್ನು ಬೆಂಬಲಿಸಿದರು. ಕಲಿಕಾ ಫಲಿತಾಂಶಗಳನ್ನು ಪಡೆಯಲು ತೊಡಕಾಗಿರುವ ಪ್ರಮುಖ ಸಮಸ್ಯೆಗಳನ್ನು ಸಿಸಿಇ(CCE) ಉಲ್ಲೇಖಿಸಿದರೆ, ಅದನ್ನು ತಿಳಿದುಕೊಳ್ಳಲು ಅವರು ಉತ್ಸುಕರಾಗಿದ್ದರು. ಆದ್ದರಿಂದ ನಾವು ಹಿಂದಿ ಮತ್ತು ಗಣಿತ ವಿಷಯದ ಕಲಿಕೆಯ ಫಲಿತಾಂಶಗಳ ಮೇಲೆ ಮೌಲ್ಯಮಾಪನವನ್ನು ಕೇಂದ್ರೀಕರಿಸಲು ನಿರ್ಧರಿಸಿದೆವು.

### ಫಲಿತಾಂಶಗಳು ಮತ್ತು ತಾರ್ಕಿಕ ವಿವರಣೆ

ಮೌಲ್ಯಮಾಪನದ ಫಲಿತಾಂಶಗಳು ಏನಾಗಿದ್ದವು? ಸಿಸಿಇ (CCE) ಅನುಷ್ಠಾನದ ಒಂದು ವರ್ಷದ ನಂತರ, ಕಂಡುಬಂದದ್ದು ಏನೆಂದರೆ, ಸಿಸಿಇ (CCE) ಅನುಷ್ಠಾನಗೊಳಿಸಲಾದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಿಂದಿ ಮತ್ತು ಗಣಿತ ಪರೀಕ್ಷೆಯ ಅಂಕಗಳು ಮತ್ತು ಇತರೆ ಶಾಲೆಗಳ ವಿದ್ಯಾರ್ಥಿಗಳು ಗಳಿಸಿದ ಅಂಕಗಳು ಒಂದೇ ರೀತಿಯಾಗಿದ್ದವು. ಎರಡೂ ವಿಷಯಗಳ ಕಲಿಕೆಯಲ್ಲಿ ಸಿಸಿಇ(CCE) ಶಾಲೆಯ ವಿದ್ಯಾರ್ಥಿಗಳು ಸಿಸಿಇ(CCE) ಯೇತರ ಶಾಲೆಗಳ ವಿದ್ಯಾರ್ಥಿಗಳಿಗಿಂತ ಗಮನಾರ್ಹ ಹೆಚ್ಚಿನ ಸಾಧನೆ ಮಾಡಿರಲಿಲ್ಲ. ಹೀಗಾಗಿ ನಾವು ಸಿಸಿಇ(CCE) ಕಾರ್ಯಕ್ರಮ ಕಲಿಕಾ ಫಲಿತಾಂಶಗಳನ್ನು ಸುಧಾರಿಸಲಿಲ್ಲ ಎಂದು ತೀರ್ಮಾನಿಸಬಹುದು.

ಕಲಿಕೆಯ ಫಲಿತಾಂಶಗಳ ಸುಧಾರಣೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ವಿನ್ಯಾಸ ಗೊಳಿಸಲು ಏಕೆ ಸಾಧ್ಯವಾಗಲಿಲ್ಲ? ಕಾರ್ಯಕ್ರಮ ವಿಫಲಗೊಳ್ಳಲು ಎರಡು ಮುಖ್ಯಕಾರಣಗಳಿವೆ ಅವುಗಳೆಂದರೆ– ಪ್ರಮುಖ ಸಮಸ್ಯೆಯನ್ನು ಪರಿಹರಿಸಲು ಅವುಗಳನ್ನು ವಿನ್ಯಾಸಗೊಳಿಸಲಾಗಿಲ್ಲ ಮತ್ತು/ ಅಥವಾ ಅವುಗಳನ್ನು ಕ್ಷೇತ್ರ(ಫೀಲ್ಡ್)ದಲ್ಲಿ ಸರಿಯಾಗಿ ಕಾರ್ಯಗತಗೊಳಿಸಲಾಗಿಲ್ಲ. ಈ ವಿಭಾಗದಲ್ಲಿ, ನಾವು ನೈಜ ಘಟನೆಗಳು ಮತ್ತು ದತ್ತಾಂಶ ಎರಡರ ಸಹಾಯದ ಮೂಲಕ ಉಂಟಾಗಿರುವ ಸಮಸ್ಯೆಗಳನ್ನು ತೆರೆದಿಡುತ್ತೇವೆ.

ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕಾಗಿ, ಕಾರ್ಯಕ್ರಮದ 'ಪೂರೈಕೆದಾರರು' (ಇಲ್ಲಿ, ಶಿಕ್ಷಕರು), ಸೂಕ್ತ ತರಬೇತಿಯನ್ನು ಪಡೆದಿರಬೇಕು, ಮೇಲ್ವಿಚಾರಣೆಗೆ ಒಳಪಡುತ್ತಿರಬೇಕು ಹಾಗೂ ಅಗತ್ಯವಿದ್ದಾಗ ಅವರಿಗೆ ಬೆಂಬಲ ಲಭ್ಯವಿರಬೇಕು. ನಮ್ಮ ಮೌಲ್ಯಮಾಪನದ ಪ್ರಕಾರ 90 ಪ್ರತಿಶತಕ್ಕಿಂತಲೂ ಹೆಚ್ಚು ಶಿಕ್ಷಕರು ಸಿಸಿಇ(CCE)ಯನ್ನು ಕುರಿತಂತೆ ತರಬೇತಿಯನ್ನು ಪಡೆದಿದ್ದಾರೆ, ಕೇವಲ 41 ಪ್ರತಿಶತ ಪ್ರಾಥಮಿಕ ಮತ್ತು 21 ಶೇಕಡಾ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳ ಶಿಕ್ಷಕರು ದಾಖಲೀಕರಣಕ್ಕೆ ಅಗತ್ಯವಾದ ಮತ್ತು ಮೌಲ್ಯಮಾಪನದ ಮಾಹಿತಿಗಳನ್ನು ಒಳಗೊಂಡಿರುವ ಮೌಲ್ಯಮಾಪನದ ದಾಖಲೆಗಳನ್ನು ಮತ್ತು ಪ್ರಗತಿ ಪತ್ರಗಳನ್ನು ನಿರ್ವಹಣೆ ಮಾಡಿದ್ದಾರೆ. ಈ ಆಘಾತಕಾರಿ ಅಂಶದ ನಡುವೆ ಇನ್ನೂ ಕಳವಳಕಾರಿ ಅಂಶವೆಂದರೆ, ದಾಖಲೆಗಳ ನಿರ್ವಹಣೆ ಮಾಡಲಾಗಿದ್ದರೂ, ಮೌಲ್ಯಮಾಪನದ ಮಾಹಿತಿಗಳನ್ನು ಕಲಿಕೆಯಲ್ಲಿ ಹಿಂದುಳಿದಿರುವವರನ್ನು ಗುರುತಿಸಲು, ಕಲಿಕಾ ವಿಧಾನವನ್ನು ಬದಲಾಯಿಸಿಕೊಳ್ಳಲು ಅಥವಾ ವಿದ್ಯಾರ್ಥಿಗಳಿಗೆ ಅವರ ಓದುವಿಕೆಯ ಕುರಿತು ಮನವರಿಕೆ ಮಾಡಿಸಲು ಯಾವುದಕ್ಕೂ ಬಳಸಿಕೊಳ್ಳದಿರುವುದು. ಹೀಗಾಗಿ ಸಿಸಿಇ(CCE)ಯ ಪ್ರಮುಖ ಸಿದ್ಧಾಂತವನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಕುತೂಹಲಕಾರಿ ಯಾಗಿ, ಎಸ್ ಸಿಇಆರ್ ಟಿ ಅಧಿಕೃತವಾಗಿ ಹೊರಡಿಸಿದ ಸಿಸಿಇ (CCE) ವಿಷಯ ಕುರಿತ ಟಿಪ್ಪಣಿಯಲ್ಲಿ ಕಲಿಕೆಯಲ್ಲಿ ಹಿಂದುಳಿದವರನ್ನು ಗುರುತಿಸುವುದು ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು/ಪರಿಹಾರ ಬೋಧನೆ ಶಿಫಾರಸ್ಸು ಮಾಡಲಾಗಿತ್ತು ಆದರೆ, ಶಿಕ್ಷಕರ ತರಬೇತಿಯು ಪರಿಹಾರ ಕ್ರಮಗಳನ್ನು ವ್ಯಾಪಕವಾಗಿ ಒಳಗೊಂಡಿರಲಿಲ್ಲ. ರಾಜ್ಯದಲ್ಲಿ ಕಳಪೆ/ ಕಡಿಮೆ ಕಲಿಕಾ ಫಲಿತಾಂಶಗಳ ಹೊರತಾಗಿಯೂ, ಈ ಕಳಪೆ ಪ್ರದರ್ಶನದ ಹಿಂದಿರುವ ವಿವಿಧ ಕಾರಣಗಳಿಗೆ ಯಾವ ನಿರ್ದಿಷ್ಟ ಪರಿಹಾರ ಕ್ರಮಗಳನ್ನೂ ಸೂಚಿಸಿರಲಿಲ್ಲ. ಎಸ್ಇಆರ್‌ಟಿ (SCERT) ಯಲ್ಲಿನ ಅಧ್ಯಾಪಕ ವೃಂದ ನೀಡಿದ ಇಂಗಿತದಂತೆ, ಪರಿಹಾರ ಬೋಧನೆಯ ಕ್ರಮಗಳನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಶಿಕ್ಷಕರಿಗೇ ಬಿಡಲಾಗಿದೆ. ಸಿಸಿಇ(CCE)ಯ ವಿನ್ಯಾಸ 20 ಕೌಶಲಗಳು

ಮತ್ತು 41 ಉಪ ಕೌಶಲಗಳನ್ನು ಹೊಂದಿದ್ದು, ಈ ಎಲ್ಲಾ ವಿಷಯಗಳಲ್ಲೂ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವುದು ಅತ್ಯಂತ ಕಠಿಣವಾದುದು. ಮುಖ್ಯ ಶಿಕ್ಷಕರು ಸಾಮಾನ್ಯವಾಗಿ ವ್ಯಕ್ತಪಡಿಸುವ ವಿಷಯವೆಂದರೆ ಸಿಸಿಇ (CCE) ಸಾಕಷ್ಟು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಸಮೀಕ್ಷೆಯಲ್ಲಿ ಪಾಲ್ಗೊಂಡ ಮೂರನೇ ಎರಡರಷ್ಟು ಶಿಕ್ಷಕರು ಸಿಸಿ ಇ(CCE) ಅನುಷ್ಠಾನಗೊಳಿಸುವಲ್ಲಿ ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಹೇಳಿದರು ಮತ್ತು ಶೇಕಡಾ 10 ಕ್ಕಿಂತಲೂ ಕಡಿಮೆ ಶಿಕ್ಷಕರು ಮಾತ್ರ ಇದು ಬೋಧನೆಯ ಮೇಲೆ ಧನಾತ್ಮಕವಾಗಿ ಪರಿಣಾಮ ಬೀರಿತು ಎಂದು ಅಭಿಪ್ರಾಯ ಪಡುತ್ತಾರೆ.

ಕ್ಷೇತ್ರದಲ್ಲಿ ಸಂಚರಿಸಿ ಶಿಕ್ಷಕರೊಂದಿಗೆ ಮಾತನಾಡಿದಾಗ, ನಾವು ಶಿಕ್ಷಕರ ಪ್ರಕಾರ ಸಿಸಿಇ (CCE) ಎಂದರೆ ಏನು ಎಂಬುದರ ಬಗ್ಗೆ ಹೆಚ್ಚು ಸೂಕ್ಷ್ಮವಾದ ತಿಳುವಳಿಕೆಯನ್ನು ಪಡೆದುಕೊಂಡೆವು. ಗಮನಾರ್ಹ ಸಂಖ್ಯೆಯ ಶಿಕ್ಷಕರು ಸಿಸಿಇ (CCE) ಅನ್ನು ವಿದ್ಯಾರ್ಥಿಯನ್ನು ಮೌಲ್ಯಮಾಪನ ಮಾಡುವ ಸಂಖ್ಯೆಯಲ್ಲಿನ ಹೆಚ್ಚಳವಾಗಿ ಪರಿಗಣಿಸಿದ್ದಾರೆ. ಹೆಚ್ಚು ಹೆಚ್ಚು ಪ್ರಾಜೆಕ್ಟ್ ಗಳನ್ನು ಮಾಡುವುದು ಅಥವಾ ಸಹ ಪಠ್ಯ ಚಟುವಟಿಕೆಗಳತ್ತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಎಂದು ಅಭಿಪ್ರಾಯ ಪಡುತ್ತಾರೆ. 'ನೋ ಡಿಟೆಂಷನ್ ಪಾಲಿಸಿ' ಎಂದರೆ ಒಂದರಿಂದ ಎಂಟನೇ ತರಗತಿಯವರೆಗೆ ಎಲ್ಲರನ್ನೂ ಉತ್ತೀರ್ಣಗೊಳಿಸಿ ಮುಂದಿನ ತರಗತಿಗೆ ಕಳುಹಿಸುವ ನೀತಿಯನ್ನು ಸಹ ಅದೇ ಸಮಯದಲ್ಲಿ ಪರಿಚಯಿಸಲಾಗಿತ್ತು. ಈ ನೀತಿಯನ್ನು ಶಿಕ್ಷಕರು 'ಪರೀಕ್ಷೆಗಳು/ಮೌಲ್ಯಮಾಪನಗಳೇ ಇಲ್ಲ' ಎಂಬುದಾಗಿ ಭಾವಿಸಿ, ಸಿಸಿಇ (CCE) ಅಗತ್ಯವನ್ನು ಪ್ರಶ್ನಿಸಿದರು. ಪೂರ್ಣಗೊಂಡ ಮೌಲ್ಯಮಾಪನ ಪ್ರತಿಗಳನ್ನು/ಹಾಳೆಗಳನ್ನು ಪರಿಶೀಲಿಸಿದಾಗ ಶಿಕ್ಷಕರು 'ತೃಪ್ತಿಕರ ಅಂದಷ್ಟೆ ಬರೆದರೆ ಕೆಲವರು ಏನೂ ಬರೆಯಲಿಲ್ಲ. /ಉತ್ತಮ' ಇತರೆ ಯಾವುದೇ ರೀತಿಯ ಸಲಹೆ/ ಸೂಚನೆಗಳನ್ನು ನಮೂದಿಸಿರುವುದು ನಮಗೆ ಕಂಡುಬರಲಿಲ್ಲ. ಕೆಲವು ಶಿಕ್ಷಕರು ಸಹ ಪಠ್ಯ ಚಟುವಟಿಕೆಗಳನ್ನು ಮತ್ತು ವಿದ್ಯಾರ್ಥಿಗಳ ನಡವಳಿಕೆಯನ್ನು ಮೌಲ್ಯಮಾಪನ ಮಾಡುವ ಕುರಿತು ಬಹಳಷ್ಟು ಹೆಚ್ಚಿನ ತರಬೇತಿ ಅಗತ್ಯವಿದೆ ಎಂದರು. ಮೌಲ್ಯಮಾಪನವನ್ನು ಪೂರ್ಣಗೊಳಿಸಿದ ಶಿಕ್ಷಕರಿಗೂ ಕೂಡ ಯಾವ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ, ಏಕೆ, ಎಂಬುದನ್ನು ಸೂಚಿಸಲು ಸಾಧ್ಯವಾಗಿಲ್ಲ. ಪರಿಹಾರ ಕ್ರಮಗಳಿಗಾಗಿ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುವುದು ಬಾಕಿ ಇದೆ. ಈ ನಿಟ್ಟಿನಲ್ಲಿ ಇನ್ನೂ ಸಾಕಷ್ಟು ದೂರವನ್ನು ಕ್ರಮಿಸಬೇಕಿದೆ. ಈ ಸಂಭಾಷಣೆಗಳು ಮತ್ತು ಅವಲೋಕನಗಳು ಶಿಕ್ಷಕರು ಸಿಸಿಇ (CCE) ಸಿದ್ಧಾಂತದ ಅಂತಃಸತ್ವವನ್ನೇ ಅರಿತಿಲ್ಲ, ಇದು ಅದನ್ನು ಕಾರ್ಯಗತ ಗೊಳಿಸುವ ನಿಟ್ಟಿನಲ್ಲಿ ಅವರ ಆಸಕ್ತಿಮತ್ತು ಸಾಮರ್ಥ್ಯದ ಮೇಲೆ ಪರಿಣಾಮ ಬೀರಿರಬಹುದು ಎಂಬುದನ್ನು ಸೂಚಿಸುತ್ತದೆ.

**ಕಲಿತ ಪಾಠಗಳು**

ನಮ್ಮ ಮೌಲ್ಯಮಾಪನ ನಿರ್ದಿಷ್ಟವಾಗಿ ಹರಿಯಾಣದ ಸಿಸಿಇ (CCE) ಕಾರ್ಯಕ್ರಮವನ್ನು ಪರಿಶೀಲಿಸಿದರೂ, ಇತರೆ ರಾಜ್ಯಗಳಿಗೂ ಇಲ್ಲಿ ಕಲಿತ ಹೆಚ್ಚಿನ ಪಾಠಗಳು ಅನ್ವಯವಾಗುತ್ತವೆ. ಹರಿಯಾಣದ ಸಿಸಿಇ (CCE) ಅನ್ನು ವಿದ್ಯಾರ್ಥಿಗಳ ಕಾರ್ಯಕ್ಷಮತೆ ಅಥವಾ ಶಿಕ್ಷಕರ ಉತ್ಸಾಹವನ್ನು ಗಮನದಲ್ಲಿ ಇಟ್ಟುಕೊಂಡು ವಿನ್ಯಾಸಗೊಳಿಸಲಾಗಿಲ್ಲ. ಕನಿಷ್ಠ ಮಟ್ಟದ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವತ್ತ ಗುರಿಯನ್ನು ಕೇಂದ್ರೀಕರಿಸದಿರುವುದರಿಂದ ಮತ್ತು ಪ್ರತಿಕ್ರಿಯೆಯ /ಫೀಡ್‌ಬ್ಯಾಕ್ ವ್ಯವಸ್ಥೆಯತ್ತ ಗಮನಹರಿಸದ ಕಾರಣ ಇದು ಫಲಗೊಂಡಿತು.

ಒಂದು ಮಾದರಿ ಸಿಸಿಇ (CCE) ಕಾರ್ಯಕ್ರಮ ಕೇವಲ ವಿಭಿನ್ನ ಮೌಲ್ಯಮಾಪನ ವಿಧಾನಗಳು ಮತ್ತು ಅನೇಕ ವಿಧದ ಮೌಲ್ಯಮಾಪನಗಳಿಗೆ ಒಳಪಡುವುದನ್ನಷ್ಟೇ ಒಳಗೊಂಡಿರುವುದಿಲ್ಲ. ಇದು ಪ್ರತೀ ಹಂತಗಳನ್ನು ಸ್ಪಷ್ಟವಾಗಿ ಪಟ್ಟಿಮಾಡುತ್ತದೆ ಮತ್ತು ಇದನ್ನು ಆಧರಿಸಿ ಮೌಲ್ಯಮಾಪನದ ದತ್ತಾಂಶಗಳನ್ನು ವಿಶ್ಲೇಷಿಸಬಹುದಲ್ಲದೆ ಕಲಿಸುವ ಹಾಗೂ ಕಲಿಯುವ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ. ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಯನ್ನು ಗುರುತಿಸಲು ಇದು ಸ್ಪಷ್ಟ ಮಾರ್ಗಸೂಚಿಗಳನ್ನು ನೀಡುತ್ತದೆ ಮತ್ತು ಅಳವಡಿಸಿಕೊಳ್ಳಬಹುದಾದ ಪರಿಹಾರ ಕ್ರಮಗಳ ಬಗೆಗೂ ಒಳನೋಟಗಳನ್ನು ಒದಗಿಸುತ್ತದೆ. ಆಡಳಿತವು ಪರಿಹಾರಾತ್ಮಕ ಬೋಧನೆಗೆ ಸಂಬಂಧಿಸಿದಂತೆ ತಮಗೆ ಅಗತ್ಯವಿರುವ ಮಾದರಿಗಳ ರೂಪುರೇಷೆಗಳನ್ನು ರೂಪಿಸಿಕೊಳ್ಳಲು ಶಿಕ್ಷಕರು ಸಮರ್ಥರು ಎಂದು ಭಾವಿಸಿದ್ದರೂ, ಕ್ಷೇತ್ರಕಾರ್ಯದಲ್ಲಿ ನಮಗೆ ದೊರಕಿದ ಒಳನೋಟಗಳು ಶಿಕ್ಷಕರಿಗೆ ಈ ಕೌಶಲ್ಯ ಇಲ್ಲ ಎಂಬುದನ್ನು ಸೂಚಿಸುತ್ತದೆ. ಹೀಗಾಗಿ ಈ ಕುರಿತು ರಾಜ್ಯಗಳೇ ನೀತಿ ರೂಪಿಸುವ ಅಗತ್ಯವಿದೆ. ಮೌಲ್ಯಮಾಪನದಲ್ಲಿ ಅತೀ ಹೆಚ್ಚು ಮಾನದಂಡಗಳನ್ನು ಅಳವಡಿಸಿಕೊಳ್ಳುವುದರಿಂದ ಮೌಲ್ಯಮಾಪನಕ್ಕೆ ದೀರ್ಘಾವಧಿ ತಗಲುತ್ತದೆ. ಅದರ ಬದಲು ಅದೇ ಸಮಯವನ್ನು ಇನ್ನಿತರ ಉತ್ಪಾದಕ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು. ಇತರ ರಾಜ್ಯಗಳಲ್ಲಿ ಪರಿಚಯಿಸಲಾದ ಸಿಸಿಇ (CCE) ಕಾರ್ಯಕ್ರಮ ಗಳಲ್ಲಿಯೂ ಇದೇ ರೀತಿಯ ದಾಖಲಾತಿಯ ಅಗತ್ಯವಿದೆ. ಅಲ್ಲಿಯೂ ಇದು ಹರಿಯಾಣದ ಸಿಸಿಇ (CCE) ಕಾರ್ಯಕ್ರಮ ದಂತೆಯೇ ಹೊರೆಯಾಗಿಬಿಡುವ ಸಂಭವವಿದೆ. ಆಶ್ಚರ್ಯಕರ ಎಂಬಂತೆ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ(NCERT)ಯ 2014ರ ವರದಿಯು ಅನೇಕ ರಾಜ್ಯಗಳು ಸಿಸಿಇ (CCE) ಕಾರ್ಯಕ್ರಮದ ಭಾಗವಾಗಿ ಅಂತಹ ದಾಖಲಾತಿಗಳ ಅವಶ್ಯಕತೆಗಳನ್ನು ಹೊಂದಿವೆ ಎಂದು ಸೂಚಿಸಿದೆ.

ಸಿಸಿಇ (CCE), ಸ್ಪಷ್ಟವಾದ ಸಿದ್ಧಾಂತ ಆಧಾರಿತವಾಗಿದ್ದರೂ, ಕಲಿಕೆಯ ಫಲಿತಾಂಶಗಳು ಮೇಲೆ ಅದು ಗಮನಾರ್ಹ ಪರಿಣಾಮ ಬೀರಿರುವುದು ಕಂಡುಬಂದಿಲ್ಲ. ಹೀಗಾಗಿ ಇದು ಭಾರತಕ್ಕೆ ಅಗತ್ಯವಿರುವ ಕಾರ್ಯಕ್ರಮವಲ್ಲ. ಭಾರತದ ಪ್ರಸ್ತುತ ಸನ್ನಿವೇಶದಲ್ಲಿ -ಇಲ್ಲಿನ ಹೆಚ್ಚಿನ ಪಾಲು ವಿದ್ಯಾರ್ಥಿಗಳು ಶಿಕ್ಷಣದ ಮೂಲಭೂತ ಅಂಶಗಳ ಕಲಿಕೆಯ ಸಾಮರ್ಥ್ಯವನ್ನೇ ಹೊಂದಿಲ್ಲ. ನಿರ್ದಿಷ್ಟವಾಗಿ ಶಿಕ್ಷಣದ ಮೂಲಭೂತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವತ್ತಲೇ ಕೇಂದ್ರೀಕರಿಸುವ ಕಾರ್ಯಕ್ರಮಗಳ ತುರ್ತು ಅಗತ್ಯವಿದೆ. ಕುತೂಹಲಕರವೆಂದರೆ, ಭಾರತದಲ್ಲಿ ಸಿಸಿಇ(CCE)ಯ ಪ್ರವರ್ತಕ ಸಿಬಿಎಸ್‌ಸಿಗೆ, ಸಿಸಿಇ(CCE)ಯ ಕುಂದು-ಕೊರತೆಗಳು ಅರಿವಾಗಿದೆ ಎಂದು ಕಾಣುತ್ತದೆ. ಹೀಗಾಗಿ ಅದು ತನ್ನ ಮಾಧ್ಯಮಿಕ ಶಾಲೆಗಳಲ್ಲಿ ಸಿಸಿಇ(CCE)ಯ ಆರಂಭಕ್ಕೂ ಮೊದಲು ಅಸ್ತಿತ್ವದಲ್ಲಿದ್ದ ಮೌಲ್ಯಮಾಪನ ವ್ಯವಸ್ಥೆಯನ್ನೇ ಮರುಸ್ಥಾಪಿಸಿದೆ. ಪ್ರಸ್ತುತ ರಾಜ್ಯ ಸರ್ಕಾರಗಳು ಈ ಕಾರ್ಯಕ್ರಮವನ್ನು ಮರುಪರಿಶೀಲಿಸಿ ಪರಿಗಣಿಸಬೇಕಿದೆ.

● ಅನುವಾದಕರು: **ಶ್ರೀನಿಧಿ ಅಡಿಗ** | ಪರಿಶೀಲಕರು: **ಲತಾ ಕೆ ಸಿ**

### ಪರಾಮರ್ಶನೆಗಳು


1 ASER Centre. 2012. Annual Status of Education Report 2011. New Delhi: Pratham.

2 ———. 2017. Annual Status of Education Report (Rural) 2016. New Delhi.

3 Banerjee, Abhijit, Rukmini Banerji, Esther Duflo, Harini Kannan, Shobhini Mukherji, Marc Shotland, and Michael Walton. 2017. From Proof of Concept to Scalable Policies: Challenges and Solutions, with an Application. Journal of Economic Perspectives, Vol. 31, Number 4

4 Berry, James Harini Kannan, Shobhini Mukherji, and Marc Shotland. 2018 Failure of Frequent Assessment: An Evaluation of India's Continuous and Comprehensive Evaluation Program. Working Paper, J-PAL.

5 Black, Paul, and Dylan Wiliam. 2009. Developing the Theory of Formative Assessment. Educational Assessment, Evaluation and Accountability (Formerly: Journal of Personnel Evaluation in Education) 21 (1): 5.

6 Central Board of Secondary Education. 2009. Quarterly Bulletin of the Central Board of Secondary Education 48 (4). 2010. Continuous and Comprehensive Evaluation: Manual for Teachers, Classes VI to VIII

7 Government of India. 2009. The Right of Children to Free and Compulsory Education Act 2009. Gazette of India 39 (August).

8 Indian Express. 2017. New assessment pattern by CBSE baffles parents, schools. Retrieved on April 23rd, 2018 from http://indianexpress.com/article/education/new-assessment-pattern-by-cbse-baffles-parents-schools-4614918/

9 Sharma, Kavita. 2014. CCE Programme/Scheme of States and UTs. Department of Elementary Education, National Council of Educational Research and Training.



**ಹರಿಣಿ** ಅವರು ಐಎಫ್ಎಮ್ಆರ್‌ನಲ್ಲಿನ ದಕ್ಷಿಣ ಏಷಿಯಾದ ಜೆ-ಪಾಲ್‌ನಲ್ಲಿ ಹಿರಿಯ ಸಂಶೋಧನಾ ವ್ಯವಸ್ಥಾಪಕರು ಮತ್ತು ಪೋಸ್ಟ್-ಡಾಕ್ಟರಲ್ ಫೆಲೋ ಆಗಿದ್ದಾರೆ. ಜೆ-ಪಾಲ್ ದಕ್ಷಿಣ ಏಷಿಯಾದೊಂದಿಗೆ ಕೆಲಸ ಮಾಡುವ ಅವರ ನಿರ್ಧಾರಕ್ಕೆ ಸಾಕ್ಷ್ಯಾಧಾರಿತ ನೀತಿ ನಿರೂಪಣೆಯಲ್ಲಿನ ಅವರ ಆಸಕ್ತಿಕಾರಕವಾಯಿತು. ಪ್ರಸ್ತುತ ಅವರು ನವದೆಹಲಿಯಲ್ಲಿ ಶಿಕ್ಷಣ ಮತ್ತು ಆರೋಗ್ಯದಲ್ಲಿ ವಿವಿಧ ಮೌಲ್ಯಮಾಪನಗಳ ಮೇಲೆ ಪ್ರಧಾನ ತನಿಖಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಜೆ-ಪಾಲ್ ದಕ್ಷಿಣ ಏಷ್ಯಾ ತರಬೇತಿ ತಂಡದೊಂದಿಗೆ ಅವರು ಬಿಲ್ & ಮೆಲಿಂಡಾ ಗೇಟ್ಸ್ ಫೌಂಡೇಷನ್, USAID, ಮತ್ತು ಹರಿಯಾಣ, ತಮಿಳುನಾಡು ಮತ್ತು ಪಂಜಾಬ್ ಸರ್ಕಾರಗಳಂತಹ ವಿವಿಧ ಪಾಲುದಾರರಿಗೆ ಅವರ ಅಗತ್ಯಕ್ಕೆ ತಕ್ಕಂತಹ ಸಲಹೆ-ಸೂಚನೆ ಒದಗಿಸುವ ಕೆಲಸ ಮಾಡುತ್ತಿದ್ದಾರೆ.

ಅವರನ್ನು harini.kannan@ifmr.ac.in ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.